8.	ಮಂಡ್ಯ	14,85,469	16,95,090	9,21,333
9.	ಹಾಸನ	17,82,773	21,70,776	11,99,111
10.	ದಕ್ಷಿಣ ಕನ್ನಡ	17,82,773	21,70,776	11,99,111
11.	ಚಿಕ್ಕಮಗಳೂರು	13,58,061	14,91,225	8,02,285
12.	ಕೊಡಗು	8,99,359	7,57,310	3,73,714
13.	ಬೆಳಗಾಂ	22,09,085	29,02,599	16,26,461
14.	ಧಾರವಾಡ	20,20,615	25,51,324	14,21,333
15.	ಬಿಜಾಪುರ	19,31,423	24,08,618	13,38,000
16.	ಕಾರವಾರ	12,84,073	13,72,851	7,33,161
17.	ಗುಲ್ಬರ್ಗಾ	20,20,615	25,51,324	14,21,333
18.	ಬಳ್ಳಾರಿ	16,12,885	18,98,955	17,73,541
19.	ಬೀದರ್	12,23,143	12,75,368	6,76,235
20.	ರಾಯಚೂರು	18,52,729	22,82,702	12,64,470
	ಒಟ್ಟು	3,32,77,000	3,96,16,000	4,17,60,000

ವಿಷಯ:- ಶಿಕಾರಿಪುರ ತಾಲ್ಲೂಕಿನಲ್ಲಿ ರಾಷ್ಟ್ರೀಯ ಮೀನುಗಾರಿಕೆ ಕ್ಷೇಮಾಭಿವೃದ್ಧಿ ಯೋಜನೆಯಡಿಯಲ್ಲಿ ನಿರ್ಮಿಸಿದ ಮನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 639 (1130)

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ):- ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ರಾಷ್ಟ್ರೀಯ ಮೀನುಗಾರಿಕೆ ಕ್ಷೇಮಾಭಿವೃದ್ಧಿ ಯೋಜನೆಯಡಿಯಲ್ಲಿ ಎಷ್ಟು ಜನರಿಗೆ ಮನೆಗಳನ್ನು ಕಟ್ಟಲು ಅವಕಾಶ ಮಾಡಲಾಗಿದೆ?

ಆ) ಎಷ್ಟು ಮನೆಗಳನ್ನು ಎಷ್ಟು ಮೊತ್ತ ಖರ್ಚು ಮಾಡಿ ಕಟ್ಟಲಾಗುತ್ತಿದೆ?

ಇ) ಸರ್ಕಾರದಿಂದ ಈ ಬಗ್ಗೆ ಆದೇಶ ಹೊರಡಿಸಲಾಗಿದೆಯೇ?

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):-

ಅ) ಇಲ್ಲಿಯವರೆಗೆ ಈ ತಾಲ್ಲೂಕಿನಲ್ಲಿ ಮೀನುಗಾರರಿಗೆ ಮನೆಗಳನ್ನು ಮಂಜೂರು

ಮಾಡಿಲ್ಲ. ಇದರ ಬಗ್ಗೆ 1996-97ನೇ ಸಾಲಿನಲ್ಲಿ ಪರಿಗಣಿಸಲಾಗುವುದು.

ಆ) ಇಲ್ಲ.

ಇ) ಇಲ್ಲ.

ವಿಷಯ:- ಬಿಜಾಪುರ ಜಿಲ್ಲೆಯ ಲೋಕಾಪುರ - ಕೇಕಲಮಟ್ಟಿ - ಕಾಡರಕೊಪ್ಪ ರಸ್ತೆ ಮೇಲೆ ನಿರ್ಮಿಸುತ್ತಿರುವ ಸೇತುವೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 640 (546)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯ ಲೋಕಾಪುರ - ಕೇಕಲಮಟ್ಟಿ - ಕಾಡರಕೊಪ್ಪ ಜಿಲ್ಲಾ ಮುಖ್ಯ ರಸ್ತೆಯ ಮೇಲೆ ಕಟ್ಟುತ್ತಿರುವ ಕಿ.ಮೀ. 6 ಮತ್ತು 11ರಲ್ಲಿ ಎರಡು ಸೇತುವೆಗಳು ಯಾವಾಗ ಮಂಜೂರಾಗಿವೆ ವರ್ಷ ಹಾಗೂ ಅಂದಾಜು ವೆಚ್ಚದ ವಿವರ ನೀಡುವುದು.

ಆ) ಕಾಮಗಾರಿ ಕುಂಠಿತಗೊಂಡು ನಿಗಧಿತ ಅವಧಿಯಲ್ಲಿ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):-

ಅ) ಬಿಜಾಪುರ ಜಿಲ್ಲೆಯ ಲೋಕಾಪುರ - ಕೇಕಲಮಟ್ಟಿ - ಕಾಡರಕೊಪ್ಪ ಜಿಲ್ಲಾ ಮುಖ್ಯ ರಸ್ತೆಯ ಮೇಲೆ ಕಟ್ಟುತ್ತಿರುವ ಕಿ.ಮೀ. 6ರಲ್ಲಿನ ಸೇತುವೆ 1993-94ರಲ್ಲಿ 4 ಲಕ್ಷ ರೂ. ಅಂದಾಜಿಗೆ ಮಂಜೂರಾಗಿದೆ. ಕಿ.ಮೀ.11ರಲ್ಲಿನ ಸೇತುವೆ 1991-92ರಲ್ಲಿ 4.88 ಲಕ್ಷ ರೂ. ಅಂದಾಜಿಗೆ ಮಂಜೂರಾಗಿದೆ.

ಆ) ಕಿ.ಮೀ. 6ರಲ್ಲಿನ ಸೇತುವೆಯ ಕಾಮಗಾರಿ ಬಗ್ಗೆ ಭೂಮಾಲೀಕರಿಂದ ತಕರಾರು ಇದ್ದು, ಪ್ರಕರಣವು ನ್ಯಾಯಾಲಯದಲ್ಲಿ ಇರುವುದರಿಂದ, ನಿರ್ಣಯ ಆಗುವವರೆಗೆ ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ. ಕಿ.ಮೀ.10ರಲ್ಲಿನ ಸೇತುವೆ ನಿರ್ಮಾಣದ ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಲಾಗಿದ್ದು, ಸದರಿ ಗುತ್ತಿಗೆದಾರರು ಕೆಲಸವನ್ನು ಪೂರ್ಣಗೊಳಿಸದೆ ಇದ್ದುದರಿಂದ ಗುತ್ತಿಗೆಯನ್ನು ರದ್ದುಗೊಳಿಸಿ ಹೊಸ ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದ್ದು, ಇನ್ನು 6 ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು.

ವಿಷಯ:- ರಾಜ್ಯದಲ್ಲಿ ಮದ್ಯಪಾನ ನಿಷೇಧ ಜಾರಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 641 (1437)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ):- ಮಾನ್ಯ ಅಬಕಾರಿ ಸಚಿವರು ಈ